ಅನುಮತಿಯನ್ನು ನಿರಾಕರಿಸುತ್ತಿದ್ದೇನೆ. ಈಗ ಈ ಸಭೆಯನ್ನು ಮುಂದೂಡಲಾಗಿದೆ. ಪುನಃ ಮೂರಾವರೆ ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವನ್ನು 2.20 ಗಂಟೆ ಸಂದರ್ಭದಲ್ಲಿ ಮುಂದೂಡಲಾಯಿತು)

(ಸಭೆ ಮಧ್ಯಾಹ್ನ 3 ಗಂಟೆ 50 ನಿಮಿಷಕ್ಕೆ ಪ್ರಾರಂಭವಾಯಿತು)

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಿಯಮ 351ರ ಮೇರೆಗೆ

(1) ರಾಜ್ಯ ಸರ್ಕಾರ ಮೋಟಾರು ವಾಹನಗಳ ಮೇಲೆ ವಿಧಿಸಿದ ಜೀವಮಾನ ತೆರಿಗೆ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪಸಭಾಧ್ಯಕ್ಷರೆ, ರಾಜ್ಯ ಸರ್ಕಾರ ಜಾರಿಗೆ ತಂದ ಮೋಟಾರು ವಾಹನಗಳ ಮೇಲೆ ವಿಧಿಸಿದ ಜೀಮಾನ ತೆರಿಗೆ (ಲೈಫ್ ಟ್ಯಾಕ್ಸ್) ಕಟ್ಟಲು ಕೊನೆಯ ದಿನಾಂಕ 15.3.1996 ಎಂದು ಎಲ್ಲಾ ಕಡೆ ಪ್ರಕಟಣೆಗಳನ್ನು ನೀಡಲಾಗಿದೆ. ಸ್ವ ಉದ್ಯೋಗ ಯೋಚನೆಯ ಅನ್ವಯ ಆರ್ಥಿಕವಾಗಿ ಹಿಂದುಳಿದವರು ಬ್ಯಾಂಕ್ ಸಾಲ ಪಡೆದು ರಿಕ್ಷಾ, ಮ್ಯಾಕ್ಸಿ ಕ್ಯಾಬ್, ಟೂರಿಸ್ಟ್ ಟ್ಯಾಕ್ಸಿಗಳನ್ನು ನಡೆಸುವವರಿಗೆ ಈ ಜೀವಮಾನ ತೆರಿಗೆ ಕಟ್ಟಲು ಮತ್ತೆ ಸಾಲ ಮಾಡಬೇಕಾಗುವಂತಹ ನಿಕೃಷ್ಟ ಪರಿಸ್ಥಿತಿ ಬಂದಿದೆ. ಆದುದರಿಂದ ಈ ದುಡಿಯುವ ವರ್ಗದವರು ಅನುಭವಿಸಬೇಕಾಗಿರುವ ತೊಂದರೆ, ಕಷ್ಟ ನಷ್ಟಗಳಿಂದಾಗಿ ಸರ್ಕಾರ ಈ ಬಗ್ಗೆ ಏನಾದರೂ ರಿಯಾಯಿತಿಯನ್ನು ಪ್ರಕಟಿಸಬೇಕು, ಇಲ್ಲವೇ ಕನಿಷ್ಠ ಇನ್ನೊಂದು ವರ್ಷಕ್ಕಾದರೂ (ದ್ವಿಚಕ್ರ ವಾಹನ ಸಹಿತ) ಈ ಜೀವಮಾನ ತೆರಿಗೆಯನ್ನು ಕಟ್ಟುವ ದಿನಾಂಕವನ್ನು ಮುಂದುವರಿಸಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಉಪಸಭಾಧ್ಯಕ್ಷರೆ ತಮ್ಮ ಅನುಮತಿ ಪಡೆದು ಈ ಹೇಳಿಕೆಯನ್ನು ಸಭೆಯ ಮುಂದೆ ನೀಡಬಯಸುತ್ತೇನೆ.

ಕರ್ನಾಟಕ ಸರ್ಕಾರವು ಕರ್ನಾಟಕ ಕಾಯ್ದೆ 7:95ಅನ್ನು ದಿನಾಂಕ : 1-4-1995ರಿಂದ ಜಾರಿಗೆ ಬರುವಂತೆ ಮೋಟಾರು ಕಾರು, ಜೀಪ್ ಮತ್ತು ಆಟೋರಿಕ್ಷಾ ವಾಹನಗಳಿಗೆ ಜೀವಾವಧಿ, ತೆರಿಗೆಯನ್ನು ವಿಧಿಸಲಾಗುತ್ತಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಜೀವಾವಧಿ ತೆರಿಗೆಯ ಹೊರೆ ಜಾಸ್ತಿಯಾಗಬಾರದೆಂದು ಮತ್ತು ಸಂಘ - ಸಂಸ್ಥೆಗಳ ಮನವಿಯನ್ನು ಪರಿಗಣಿಸಿ ಭಾಗ-ಎ4 ಮತ್ತು ಭಾಗ ಎ5ನಲ್ಲಿ ವಿಧಿಸಿರುವ ಜೀವಾವಧಿ ತೆರಿಗೆಯನ್ನು ಎರಡು ಕಂತುಗಳಲ್ಲಿ ದಿನಾಂಕ 15-3-1996ರ ಒಳಗಾಗಿ ಪಾವತಿಸಲು ಸರ್ಕಾರವು ಅಧಿಸೂಚನೆ ಸಂಖ್ಯೆ :ಹೆಚ್‌ಟಿಡಿ : 28 : ಟಿಎಂಆರ್ 95 (11) ದಿನಾಂಕ : 21-4-1995ರಂದು ಈ ಅಧಿಸೂಚನೆಯಲ್ಲಿ ಮೊದಲ ಕಂತು ಪಾವತಿಸಿದ ನಂತರ ಎರಡನೆಯ ಕಂತನ್ನು ಪಾವತಿಸಲು 6 ತಿಂಗಳ. ಅವಧಿಯನ್ನು ನೀಡಲಾಗಿದೆ. ಈ ಅಧಿಸೂಚನೆಯ ಸೌಲಭ್ಯವನ್ನು ಎಲ್ಲಾ ಮಾಲೀಕರು ಪಡೆದುಕೊಂಡಿರುತ್ತಾರೆ. ಈಗಾಗಲೇ ಹನ್ನೊಂದು ತಿಂಗಳು ಮುಗಿಯುತ್ತಾ ಬಂದಿದ್ದು ಸಾಕಷ್ಟು ಮಾಲೀಕರು ತೆರಿಗೆಯನ್ನು ಪಾವತಿಸಿರುತ್ತಾರೆ.

ಶ್ರೀ ಕುಂಬ್ಳೆ ಸುಂದರರಾವ್ ಮತ್ತು ಶ್ರೀ ಯು.ಆರ್. . ಸಭಾಪತಿ, ವಿಧಾನ ಸಭಾ ಸದಸ್ಯರುಗಳು ಮಂಡಿಸಿರುವ ವಿಷಯದ ಬಗ್ಗೆ ವಾಹನ ಮಾಲೀಕರ ಸಮಸ್ಯೆಗಳನ್ನು ಗಮನದಲ್ಲಿ ಇಟ್ಟುಕೊಂಡು ಈಗಾಗಲೇ ಸಾರ್ವಜನಿಕ ಹಿತದೃಷ್ಟಿಯಿಂದ ಎರಡು ಕಂತುಗಳಲ್ಲಿ ತೆರಿಗೆ ಪಾವತಿಸಲು ಅನುಕೂಲ ಮಾಡಿಕೊಟ್ಟಿರುತ್ತದೆ. ಆದ್ದರಿಂದ

ಇನ್ನೂ ಒಂದು ವರ್ಷದ ಅವಧಿಯನ್ನು ವಿಸ್ತರಿಸುವುದು ರಾಜ್ಯದ ಆರ್ಥಿಕ ಹಿತದೃಷ್ಟಿಯಿಂದ ಸೂಕ್ತವಲ್ಲವೆಂದು ಹೇಳಬಯಸುತ್ತೇನೆ.

(2) ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್‌ನ ಕಾರ್ಮಿಕರ ಸಮಸ್ಯೆಗಳು

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪಸಭಾಧ್ಯಕ್ಷರೆ, ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್ ಆಡಳಿತ ವರ್ಗವು ತನ್ನ ವಿರೋದಿ ಆದೇಶ ಸಂಖ್ಯೆ 741 ದಿನಾಂಕ 16.10.95ರಂದು ಮೆ : ಗಾರ್ಡ್‌ನರ್ ಸ್ಮಿತ್ ಪ್ರೈ ಲಿ. ರವರಿಗೆ 400 ಮೆಟ್ರಿಕ್ ಟನ್ ಪಾಮ್ ಫ್ಯಾಟಿ ಆಸಿಡ್ ಎಣ್ಣೆಯ ಸರಬರಾಜಿಗೆ ಆದೇಶ ಕೊಟ್ಟಿದ್ದು ಇದುವರೆವಿಗೂ 298 ಟನ್ ಮಾತ್ರ ಕಾರ್ಖಾನೆಗೆ ಎಣ್ಣೆಯ ಸರಬರಾಜಾಗಿದ್ದು, 102 ಟನ್ ಕಡಿಮೆ ಸರಬರಾಜಾಗಿರುತ್ತದೆ. ಇದರಿಂದಾಗಿ ಈಗಾಗಲೇ ನಷ್ಟ ಅನುಭವಿಸಿ ಪುನಶ್ಚೇತನಗೊಳ್ಳುವ ಪ್ರಯತ್ನ ಮಾಡುತ್ತಿರುವ ಈ ಕಾರ್ಖಾನೆಗೆ 35 ಲಕ್ಷ ರೂ. ನಷ್ಟ ಉಂಟಾಗಿದೆ. ಈ ಪ್ರಕರಣವನ್ನು ಆಡಳಿತ ವರ್ಗ ಒಪ್ಪಿಕೊಂಡಿದ್ದರೂ ಸಹ ಈ ಮೊತ್ತವನ್ನು ಸರಬರಾಜುದಾರರಿಂದ ವಾಪಸ್ಸು ಪಡೆಯಲು ಪ್ರಯತ್ನ ಮಾಡಿರುವುದಿಲ್ಲ. ಇದರಿಂದ ಕಾರ್ಖಾನೆಯ ಉಳಿವಿಗಾಗಿ ಪಣ ತೊಟ್ಟಿರುವ ನೌಕರರು ತೀವ್ರವಾಗಿ ಅಸಮಾಧಾನಗೊಂಡಿದ್ದಾರೆ. ಇದೇ ರೀತಿ 6.2.96ರಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಕೆ.ಎಸ್.ಡಿ.ಎಲ್ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಲು ಸರ್ಕಾರ ಪ್ರಯತ್ನಿಸಿರುವುದಾಗಿ ಮಾನ್ಯ ಕೈಗಾರಿಕಾ ಸಚಿವರ ಹೇಳಿಕೆ ಪ್ರಕಟವಾಗಿದೆ. ಕಾರ್ಖಾನೆಯಲ್ಲಿ ಅನಾರೋಗ್ಯಕರ ವಾತಾವರಣಕ್ಕೆ ಕಾರಣವಾಗಿರುವ ವ್ಯಾಪಕ ಭ್ರಷ್ಟಾಚಾರ ಹಾಗೂ ಖಾಸಗೀಕರಣದ ಬಗ್ಗೆ ಕೈಗಾರಿಕಾ ಸಚಿವರ ಹೇಳಿಕೆಯಿಂದ ಕಾರ್ಖಾನೆಯ ಸಹಸ್ರಾರು ಕಾರ್ಮಿಕರು ಚಿಂತೆಗೀಡಾಗಿರುವುದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ

ಶ್ರೀ ಪಿ.ಜಿ.ಆರ್. ಸಿಂಧ್ಯ (ಮಾನ್ಯ ಭಾರೀ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಪರವಾಗಿ) : ಉತ್ತರವನ್ನು ನಂತರ ಒದಗಿಸಲಾಗುವುದು

(3) ಅರಕಲಗೂಡು ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ಅಭಾವದ ಬಗ್ಗೆ

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪ ಸಭಾಧ್ಯಕ್ಷರೆ, ಅರಕಲಗೂಡು ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿದ್ದುದರಿಂದ, ಅಭಿವೃದ್ಧಿಪಡಿಸುವ ಯೋಜನೆಯ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಆದದ್ದು ಯಾವಾಗ? ಈಗ ಯಾವ ಹಂತದಲ್ಲಿದೆ ಮತ್ತು ಕುಡಿಯುವ ನೀರಿನ ಅಭಾವವನ್ನು ನಿವಾರಿಸಲು ಇನ್ನೆಷ್ಟು ದಿಬಸಗಳಲ್ಲಿ ಅಭಿವೃದ್ಧಿ ಯೋಜನೆಯನ್ನು ಪೂರ್ಣಗೊಳಿಸಲಾಗುತ್ತದೆಂದು ತಿಳಿಸಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರವನ್ನು ಸದನದ ಮುಂದೆ ನೀಡಬಯಸುತ್ತೇನೆ.

ಅಧ್ಯಕ್ಷರೇ,

ಹಾಸನ ಜಿಲ್ಲೆ ಅರಕಲಗೂಡು ಮಧ್ಯಂತರ ಮಂಡಲಗಳಲ್ಲಿ ಒಂದಾಗಿದ್ದು, ಅಲ್ಲಿರುವ ಹಾಲಿ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಪುನಶ್ಚೇತನಗೊಳಿಸುವುದಕ್ಕೆ ತಯಾರಿಸಲಾದ ರೂ. 45.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರಿ ಆದೇಶ ಸಂಖ್ಯೆ. ಆರ್‌ಡಿಪಿ : 849 ಆರ್‌ಡಬ್ಲ್ಯೂಎಸ್(3) 92 ದಿನಾಂಕ : 4-6-92ರಲ್ಲಿ ನೀಡಲಾಗಿದೆ. ಈ ಅಂದಾಜು ಪಟ್ಟಿಗೆ ಪ್ರಧಾನ